ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಅರಸೀಕೆರೆ.

<u>ಸಿ.ಸಿ. ಸಂಖ್ಯೆ-578/2022</u>

ಫಿರ್ಯಾದುದಾರರು : ಅರಸೀಕೆರೆ ನಗರ ಪೋಲೀಸ್ ಠಾಣೆ

:: ವಿರುದ್ಧ ::

ಆರೋಪಿತರು ಉರುಲಿಂಗಪ್ಪ ಜಿ ಬಿನ್ ಲೇಟ್ ಗುರುಬಸವೇಗೌಡ,
83 ವರ್ಷ, ವಾಣಿ ಬಿಲ್ಡಿಂಗ್ ರೋಡ್,
ಗಣಪತಿ ಟೆಂಪಲ್ ಹಿಂಭಾಗ, ಅರಸೀಕೆರೆ.
ಹಾಸನ ಜಿಲ್ಲೆ.

<u>:: ದೋಷಾರೋಪಣೆ ::</u>

ಶ್ರೀಮತಿ. ಅನಿತ, ಜಿ., ಬಿ.ಕಾಂ., ಎಲ್.ಎಲ್.ಬಿ. ಡಿ.ಸಿ.ಎಸ್., ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಸೀಕೆರೆ ಆದ ನಾನು, ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ:

ಅರಸೀಕೆರೆ ನಗರ ಪೋಲೀಸ್ ಠಾಣಾ ಸರಹದ್ದಿನ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಭವನದಲ್ಲಿ ದಿಃ 20-08-2022 ರಂದು ಮಧ್ಯಾಹ್ನ 4-00 ಗಂಟೆ ಸಮಯದಲ್ಲಿ ಸಾಕ್ಷಿ-1 ರಿಂದ 5 ರವರ ಸಮ್ಮುಖದಲ್ಲಿ ಆರೋಪಿಯಾದ ನಿಮ್ಮನ್ನು ಕರೆಸಿ ದಿಃ18-08-2022 ರಂದು ಸಾಕ್ಷಿ-6 ರವರ ಹತ್ತಿರ ಫೈಲುಗಳನ್ನು ಕಿತ್ತುಕೊಂಡಿರುತ್ತಾರೆಂಬ ವಿಚಾರವಾಗಿ ಅದೇ ದಿನ ಸಾಕ್ಷಿ-6 ರವರು ಸಂಘಕ್ಕೆ ದೂರು ಸಲ್ಲಿಸಿದ್ದು ಈ ಸಂಬಂಧ ವಿಚಾರ ಮಾಡುತ್ತಿರುವಾಗ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಏಕಾಏಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಸಾಕ್ಷಿ-1 ರವರ ಮನಃಶಾಂತಿಗೆ ಭಂಗವನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂಃ 504 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ನ್ಯಾಯಾಲಯದ ಸಂಜ್ಞಾತಿಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಕೈಗಳಿಂದ ಸಾಕ್ಷಿ-1 ರವರ ಮೈಕೈಗೆ ಗುದ್ದಿ ನೋವನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂಃ 323 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ನ್ಯಾಯಾಲಯದ ಸಂಜ್ಞಾತಿಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸಂಘದಲ್ಲಿದ್ದ ಮರದ ಚೇರಿನ ಕಾಲಿನಿಂದ ಸಾಕ್ಷಿ-1 ರವರ ಎಡಭಾಗದ ಕಿರುಬೆರಳಿಗೆ ಹೊಡೆದು ನೋವುಂಟುಪಡಿಸಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂಃ **324** ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ನ್ಯಾಯಾಲಯದ ಸಂಜ್ಞಾತಿಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಅಲ್ಲಿಂದ ಹೋಗುವಾಗ ಇನ್ನೊಮ್ಮೆ ನನ್ನ ತಂಟೆಗೆ ಬಂದರೆ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂಃ **506** ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ನ್ಯಾಯಾಲಯದ ಸಂಜ್ಞಾತಿಯಲ್ಲಿ ಮಾಡಿರುತ್ತೀರಿ.

( ಮೇಲಿನ ಆಪಾದನೆಯನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ಅವರು ಅರ್ಥೈಸಿಕೊಂಡು ನೀಡಿದ ಉತ್ತರವನ್ನು ಸರಿಯಾಗಿ ನನ್ನ ಸ್ವ ಹಸ್ತದಿಂದ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ)

( ಅನಿತ ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಅರಸೀಕೆರೆ.
ಸಿ.ಸಿ. ನಂಃ 578/2022

ಫಿರ್ಯಾದುದಾರರು ಃ ಅರಸೀಕೆರೆ ನಗರ ಪೋಲೀಸ್

-ಃ ವಿರುದ್ಧ ಃ-

ಆರೋಪಿತರು 1. ಉರುಲಿಂಗಪ್ಪ ಜಿ ಬಿನ್ ಲೇಟ್ ಗುರುಬಸವೇಗೌಡ,

ಪ್ರಶ್ನೆಃ ಮೇಲೆ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?
ಉತ್ತರಃಃ ಹೌದು

ಪ್ರಶ್ನೆಃ ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರೇ?ಅಥವಾ ವಿಚಾರಣೆಯಾಗಬೇಕೆ?
ಉತ್ತರಃಃ ಇಲ್ಲಾ, ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ಅವರು ಅರ್ಥೈಸಿಕೊಂಡು ನೀಡಿದ ಉತ್ತರವನ್ನು ಸರಿಯಾಗಿ ನನ್ನ ಸ್ವ ಹಸ್ತದಿಂದ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

( ಅನಿತ ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಅರಸೀಕೆರೆ.